# MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯಡಿಯಲ್ಲಿ ಸಸ್ಯಾಗಾರಗಳ ಉನ್ನತೀಕರಣದ (Nursery upgradatation) ಮಾರ್ಗಸೂಚಿ

**ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು :**

2015-16 ನೇ ಸಾಲಿನ MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯಡಿ, ಪ್ರದೇಶ ವಿಸ್ತರಣೆ ಕಾರ್ಯಕ್ರಮದಲ್ಲಿ ರೈತರಿಗೆ ಉತ್ತಮ ಗುಣಮಟ್ಟದ ಕಸಿ / ಸಸಿ ಗಿಡಗಳನ್ನು (Good quality planting materials) ಒದಗಿಸುವುದು ಅತಿ ಮುಖ್ಯವಾಗಿರುತ್ತದೆ. ಈ ರೀತಿಯ ಉತ್ತಮ ಗುಣಮಟ್ಟದ ಕಸಿ/ ಸಸಿ ಗಿಡಗಳನ್ನು ಉತ್ಪಾದನೆ ಮಾಡಲು ಈಗಾಗಲೇ ನಿರ್ಮಿಸಲಾಗಿರುವ ಸಸ್ಯಾಗಾರಗಳನ್ನು ಮೇಲ್ದರ್ಜೆಗೆ ಏರಿಸಲು ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಸಹಾಯಧನ ಮಂಜೂರು ಮಾಡುವ ಅವಕಾಶವಿದೆ.

## 1. ಕಾರ್ಯಕ್ರಮದ ವಿವರ:

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿ ಸಸ್ಯಾಗಾರಗಳ ಉನ್ನತೀಕರಣ ಮಾಡಲು ಹಾಗೂ ಮಾನ್ಯತೆ ಮಾಡುವ (accreditation) ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಈ ಸಸ್ಯಾಗಾರಗಳಲ್ಲಿ ಅವಶ್ಯಕವಾಗಿ ಬೇಕಾಗುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸಹಾಯಧನವನ್ನು ನೀಡಲಾಗುವುದು. ಸದರಿ ಕಾರ್ಯಕ್ರಮವು ಪ್ರಸ್ತಾವನೆ ಆಧಾರಿತ ಕಾರ್ಯಕ್ರಮವಾಗಿರುತ್ತದೆ ಹಾಗೂ ರಾಜ್ಯ ಕಾರ್ಯಕಾರಿಣಿ ಸಮಿತಿ ಸಭೆಯಲ್ಲಿ (State Executive Committee Meeting) ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ.

## 2. ಸಸ್ಯಾಗಾರಗಳ ಉನ್ನತೀಕರಣ :

| ವಲಯ | ಘಟಕದ ಒಟ್ಟು ವೆಚ್ಚ | ಸಹಾಯಧನದ ಮೊತ್ತ |
|---|---|---|
| ಸಾರ್ವಜನಿಕ ವಲಯ | 4.ಹೆ .ಗೆ ಗರಿಷ್ಠ ರೂ.10.00 ಲಕ್ಷ | ಶೇ.100 ರಷ್ಟು ಗರಿಷ್ಠ ರೂ.10.00 ಲಕ್ಷ |
| ಖಾಸಗಿ ವಲಯ | 4.ಹೆ .ಗೆ ಗರಿಷ್ಠ ರೂ.10.00 ಲಕ್ಷ | ಶೇ.50 ರಷ್ಟು ಗರಿಷ್ಠ ರೂ.5.00 ಲಕ್ಷ |

## 3. ತಾಂತ್ರಿಕ ವೈಶಿಷ್ಟತೆ :

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ (As per NHM, GOI guidelines & cost norms) ಸಸ್ಯಾಗಾರಗಳು ಮಾನ್ಯತೆ ಪಡೆಯಲು ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರಬೇಕು.

1. Establishment of hot bed sterilization of media.
2. Working shed.
3. Virus indexing facility. (for citrus and apple)
4. Hardening chamber / Net house
5. Mist Chamber
6. Establishment of mother block
7. Irrigation and fertigation facility

**Indicative cost for Nursery upgradation (4.00 ha)**

**(Rs. In lakhs)**

| Sl. No. | Particulars | No / Quantity / Area | Admissible Indicative Project Cost |
|---|---|---|---|
| 1 | Establishment of hot bed / steem sterilization of media. | | 2.00 |
| 2 | Working shed. | 50 sqm | 1.00 |
| 3 | Hardening chamber / Net house (Rs. 710/- per sqm as per NHM cost norms) | 250 sqm | 1.77 |
| 4 | Mist Chamber (Rs. 890/- per sqm as per NHM cost norms) | 200 sqm | 1.78 |
| 5 | Establishment / extension / strengthening of mother block | | 1.00 |
| 6 | Irrigation and fertigation facility | | 1.35 |
| | **Optional** | | |
| 7 | Virus indexing facility. (for citrus and apple) | | 1.10 |
| | **TOTAL** | | **10.00** |

ಮೇಲಿನ ಐಟಂವಾರು ದರಗಳು, ಅಂದಾಜು ಮೊತ್ತವಾಗಿದ್ದು, ಒಟ್ಟಾರೆ ಎಲ್ಲಾ ಐಟಂಗಳ ಒಟ್ಟು ಮೊತ್ತ ರೂ.10.00 ಲಕ್ಷಗಳಿಗೆ ಸೀಮಿತಗೊಳಿಸಿ, ನರ್ಸರಿಯ ವಿಸ್ತೀರ್ಣದ ಆಧಾರದ ಮೇಲೆ (on prorate basis) ಸಹಾಯಧನದ ಮಿತಿಯನ್ನು ನಿರ್ಧರಿಸಬೇಕು.

**4. <u>ಸಹಾಯಧನ ಪಡೆಯಲು ಇರಬೇಕಾದ ಅರ್ಹತೆ:</u>**

- ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರವನ್ನು ಪಡೆದಿದ್ದು ನೋಟರಿರವರಿಂದ ನೋಂದಣಿಯಾಗಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆಯನ್ನು ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
- ಮಹಿಳೆಯ ಹೆಸರಿನಲ್ಲಿ ಜಮೀನಿನ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು.
- ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
- ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿಯನ್ನು ಹೊಂದಿರಬೇಕು.
- ಫಲಾನುಭವಿಯು ಕನಿಷ್ಠ 4 ಹೆಕ್ಟೇರ್ ಜಮೀನು ಹಾಗೂ ಅವರ ಹೆಸರಿನಲ್ಲಿ ಪಹಣಿಯನ್ನು ಹೊಂದಿದ್ದು, ಇತ್ತೀಚಿನ ಪಹಣಿಯನ್ನು ಲಗತ್ತಿಸಿರಬೇಕು.

5. **ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ :-**

- ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)ರವರು NHM ಯೋಜನೆಯ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಜಿಲ್ಲೆಗೆ ನಿಗಧಿಪಡಿಸಿರುವ ಗುರಿಯ ಮಿತಿಯಲ್ಲಿ ಪ್ರಕಟಣೆಯನ್ನು ಸ್ಥಳಿಯ ಪತ್ರಿಕೆಗಳು, ವಿವಿಧ ಮಾಧ್ಯಮಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ಎಲ್ಲಾ ಕಚೇರಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
- ನರ್ಸರಿಯನ್ನು ಉನ್ನತೀಕರಿಸಲು ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯಿಂದ ಫಲಾನುಭವಿಗೆ ನೀಡಿರುವ ಅನುಮತಿ ಪತ್ರವನ್ನು ಲಗತ್ತಿಸಬೇಕು.

- ಪ್ರಸ್ತಾವನೆಯಲ್ಲಿ Mist chamber ಮತ್ತು ನೆರಳು ಪರದೆಯ ವಿನ್ಯಾಸದ ಮಾದರಿಯ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ನೀಡಬೇಕು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿಯನ್ವಯ (Guidelines & cost norms) ಸಹಾಯಧನವನ್ನು ಪರಿಗಣಿಸಲಾಗುವುದು.

- ಕೇಂದ್ರ / ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ನೀಡುವುದು.

- ಫಲಾನುಭವಿ ನರ್ಸರಿದಾರರು ಈ ಹಿಂದೆ ರಾಜ್ಯ / ಕೇಂದ್ರ ಸರ್ಕಾರದ ಯಾವುದೇ ಯೋಜನೆಯಡಿ ಹಾಗೂ ನರ್ಸರಿಯ ವಿವಿಧ ಮೂಲಭೂತ ಸೌಕರ್ಯಗಳಿಗೂ / ಘಟಕಗಳಿಗೂ ಸಹಾಯಧನ ಪಡೆದಿದ್ದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಸಹಾಯಧನ ಪಡೆಯಲು ಅರ್ಹರಾಗಿರುವುದಿಲ್ಲ.

- ಹಿಂದಿನ ವರ್ಷಗಳಲ್ಲಿ ನಿರ್ಮಿಸಲಾದ ಸಸ್ಯಾಗಾರದ ಉನ್ನತೀಕರಣದ ಪ್ರಸ್ತಾವನೆಯನ್ನು ಮಂಜೂರಾತಿಗೆ ಮರು ಸಲ್ಲಿಸಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಪರಿಗಣಿಸುವುದಿಲ್ಲ.

- **ಆಸಕ್ತಿಯುಳ್ಳ ರೈತರು ಅರ್ಜಿಯನ್ನು ಚೆಕ್‌ಲಿಸ್ಟ್‌ನಲ್ಲಿರುವಂತೆ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಸತೋನಿ / ಸತೋನಿ / ಸತೋಅ / ರೈತ ಸಂಪರ್ಕ ಕೇಂದ್ರರವರ ಕಛೇರಿಗೆ ಸಲ್ಲಿಸುವುದು.**

- ಪ್ರತಿ ಅರ್ಜಿಯನ್ನು ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಹಾಗೂ ತಾಲ್ಲೂಕಿನ ಅಧಿಕಾರಿಗಳು ಕಡ್ಡಾಯವಾಗಿ ತಾಕು ಪರಿಶೀಲನೆ ನಡೆಸಬೇಕು. ಸತೋಅ (RSK) ರವರು ನಡೆಸಿರುವ ಪರಿಶೀಲನೆಯಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಅರ್ಜಿಯನ್ನು ತಿರಸ್ಕರಿಸುವುದಲ್ಲದೇ ಅವರನ್ನೇ ನೇರ ಜವಾಬ್ದಾರರನ್ನಾಗಿ ಮಾಡುವುದು. ಜಿಲ್ಲೆಯ ತೋಉನಿ (ಜಿಪಂ) ರವರು ಕಡ್ಡಾಯವಾಗಿ ಪರಿಶೀಲನೆ ಮಾಡುವುದು. ಸತೋನಿ / ಹಿಸತೋನಿ ರವರು ಪರಿಶೀಲಿಸಿರುವ ಅರ್ಜಿಗಳಲ್ಲಿ ಯಾವುದಾದರು ನ್ಯೂನ್ಯತೆಗಳಿದ್ದರೆ ಸತೋನಿ / ಹಿಸತೋನಿ ರವರನ್ನು ನೇರ ಜವಾಬ್ದಾರರನ್ನಾಗಿ ಮಾಡಿ ನಿರ್ದೇಶನಾಲಯಕ್ಕೆ ವರದಿಯನ್ನು ಸಲ್ಲಿಸುವುದು. ಮೇಲಿನ ಎಲ್ಲಾ ಅಧಿಕಾರಿಗಳು ತಮ್ಮ ಸ್ಥಳ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಛಾಯಚಿತ್ರಗಳನ್ನು ತೆಗೆದು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕು.

- ಸಸ್ಯಾಗಾರ ಉನ್ನತೀಕರಣ ಕಾರ್ಯಕ್ರಮಕ್ಕೆ ಸಹಾಯಧನ ಪಡೆಯದ ನರ್ಸರಿ / ಸಸ್ಯಾಗಾರಗಳಿಗೆ ಆದ್ಯತೆ ಮೇರೆಗೆ ಪರಿಗಣಿಸತಕ್ಕದ್ದು.

**6. <u>ತಾಂತ್ರಿಕ ಪರಿಶೀಲನಾ ಕ್ರಮಗಳು :-</u>**

ಉದ್ದೇಶಿತ ಸಸ್ಯಾಗಾರದ ಉನ್ನತೀಕರಣದ ನಂತರ ಪ್ರಸ್ತಾವನೆಯಲ್ಲಿರುವ ಅಂಶಗಳ ಬಗ್ಗೆ ಪರಿಶೀಲಿಸುವುದು. ಸಸ್ಯಾಗಾರದಲ್ಲಿ ಉತ್ಪಾದಿಸುವ ಕಸಿ / ಸಸಿ ಗಿಡಗಳ ಗುಣಮಟ್ಟ ಪರೀಕ್ಷಿಸಲು ಸಹಾಯಧನ ಪಡೆದ 6 ತಿಂಗಳ ಒಳಗಾಗಿ ಕಡ್ಡಾಯವಾಗಿ NHB Accreditation & Rating ಮಾಡಿಸಿಕೊಳ್ಳಲು ಫಲಾನುಭವಿಗಳು ಕ್ರಮವಹಿಸುವುದು.

**7. <u>ಸಹಾಯಧನದ ವಿತರಣೆ:</u>**

- ನಿರ್ದೇಶನಾಲಯದಿಂದ ಮಂಜೂರಾತಿ ಆದೇಶ ದೊರಕಿದ ನಂತರ, ಜಿಲ್ಲೆಯ ತೋಉನಿ (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿಸತೋನಿ ನೀಡಿರುವ ಅನುಷ್ಠಾನದ ವರದಿಯನ್ನು ಪರಿಶೀಲಿಸಿದ ನಂತರ ಕೆಲಸವು ತೃಪ್ತಿಕರವಾಗಿದ್ದಲ್ಲಿ ಮಾತ್ರ ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡುವುದು.
- ಫಲಾನುಭವಿಯು ನರ್ಸರಿ ಸ್ಥಾಪನೆ ಸಲುವಾಗಿ ತೆಗೆದುಕೊಂಡಿರುವ Term Loan ಬ್ಯಾಂಕ್ ಖಾತೆಗೆ ನಿಯಾಮಾನುಸಾರ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು NEFT / ECS ಮುಖಾಂತರ ಜಮಾ ಆಗುವಂತೆ ಸಹಾಯಧನ ನೀಡಲು ಕ್ರಮವಹಿಸುವುದು.
- ನರ್ಸರಿಯಲ್ಲಿ ಇಲಾಖೆಯ ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ LOGO ನೊಂದಿಗೆ ಸಹಾಯಧನವನ್ನು ಪಡೆದಿರುವ ಬಗ್ಗೆ ವಿವರಗಳನ್ನು ಒಳಗೊಂಡಂತೆ ನಾಮಫಲಕವನ್ನು ಬರೆಸಬೇಕು.

**8. <u>ಅನುಷ್ಠಾನ ವೇಳಾಪಟ್ಟಿ :</u>**

- ನರ್ಸರಿ ಉನ್ನತೀಕರಣದ ಕಾರ್ಯಕ್ರಮವನ್ನು ಹಾಲಿ ಆರ್ಥಿಕ ವರ್ಷದ ಅಂತ್ಯದೊಳಗಾಗಿ ಮುಕ್ತಾಯ ಮಾಡಿ ಸಹಾಯಧನವನ್ನು ಪಾವತಿಸಬೇಕು. ಇಲ್ಲದಿದ್ದಲ್ಲಿ, ಮಂಜೂರಾತಿ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ, ಯಾವುದೇ ಕಾರಣಕ್ಕೂ ಮುಂದಿನ ಆರ್ಥಿಕ ವರ್ಷದಲ್ಲಿ ನರ್ಸರಿ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ.

**9. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು ( Reporting and documentation)**

- ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗಿರುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ದಾಖಲಿಸಿ ಇವುಗಳ ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು ಕ.ರಾ.ತೋ.ಮಿ.ಏ. ಬೆಂಗಳೂರು ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಕಳುಹಿಸುವುದು.

ಮುಂದಿನ ಆದೇಶದವರೆಗೂ ಈ ಮಾರ್ಗಸೂಚಿಯು ಚಾಲ್ತಿಯಲ್ಲಿರುತ್ತದೆ.

**ಮಿಷನ್ ನಿರ್ದೇಶಕರು**
**ಹಾಗೂ**
**ತೋಟಗಾರಿಕೆ ನಿರ್ದೇಶಕರು**